ಶ್ರೀ ವೀರೇಂದ್ರ ಪಾಟೀಲ್.—ಐ.ಡಿ.ಎ. ನವರು ಸಹಾಯ ಮಾಡುವುದಾಗಿ ಹೇಳಿದ್ದಾರೆ. ಅದನ್ನು ರೆಕಮೆಂಡ್ ಮಾಡುವುದು ಕೇಂದ್ರ ಸರ್ಕಾರದ ಧೋರಣೆಯಾಗಿರುವುದರಿಂದ ಅನುಕೂಲವಾಗಬಹುದು. ಅಂತಿಮ ನಿರ್ಣಯ ಮಾಡುವುದು ಕೇಂದ್ರ ಸರಕಾರದ ಕೈಲಿದೆ.

ಶ್ರೀ ಬಿ. ಪಿ. ಗಂಗಾಧರ.—ಕೇಂದ್ರ ಸರಕಾರ ಇತರ ರಾಜ್ಯಗಳಿಗೆ ಹೆಚ್ಚು ಸಹಾಯ ಮಾಡಿರುವುದರಿಂದ ಕೇಂದ್ರ ಸರಕಾರವನ್ನು ಒತ್ತಾಯಮಾಡಿ ಆಂಧ್ರಕ್ಕೆ ಕೊಡುವಷ್ಟನ್ನು ನಾವೂ ಕೂಡ ಪಡೆಯುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಸಹಾಯ ದೊರೆಯಬಹುದು ಎಂಬುದನ್ನು ನೋಡಿ ನಾವು ಸೂಕ್ತ ಕ್ರಮ ಕೈಕೊಳ್ಳಬೇಕು. ಎಲ್ಲವನ್ನೂ ಕೇಂದ್ರ ಸರಕಾರವೇ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಅಸಿಸ್ಟೆನ್ಸ್ ಪ್ಯಾಟ್ರನ್ ಡಿಸೈಡ್ ಮಾಡುವುದು.

Sri R. NAGAN GOWDA.—May I know what is the policy of the Central Government in dealing with States like Mysore where irrigation is only 11 per cent, whereas in Andhra it is much more? Does not the Government of Mysore press upon the Government of India to consider this question as a very important one since people are suffering here for want of adequate rains etc., and therefore give loans or grants for taking up this project?

Sri VEERENDRA PATIL.—We have been writing to the Government of India repeatedly. But Government of India say that if Mysore Government feels that its irrigation percentage is lower it is for the State Government to give top-priority to these projects in the State plan itself. So far as question of making more provision for irrigation is concerned, it is entirely left to the State Government.

Stoppage of the Construction of Building for Primary School at Raitar Palya.

72. **Sri GANGA BOVI** (Gulur).—

Will the Minister for Education be pleased to state:—

(*a*) when the primary school at Raitar Palya included in Haralur Panchayat, Guluru Hobli, Tumkur Taluk was sanctioned;

(*b*) whether it has come to their notice that the building work is stopped in the middle;

(*c*) when this work will be got executed?

Sri N. M. KOTRA BASAIAH SOGI (Deputy Minister for Education).—

(*a*) The school was sanctioned during 1961-62.

(*b*) Yes.

(SRI N. M. KOTRABASAIAH SOGI)

(c) Construction of the building is the responsibility of the Taluk Development Board. The Taluk Board will be requeted to complete the building very early.

ಶ್ರೀ ಗಂಗಾಬೋಪಿ.—ಈ ಶಾಲೆ ಮುಂಜೂರಾಗಿ ಸುಮಾರು 9 ವರ್ಷವಾಗಿದೆ. ಆವರೂ ಕೂಡ ಇನ್ನೂ ಶಾಲಾ ಕಟ್ಟಡದ ಕೆಲಸ ಪೂರೈಸಿಲ್ಲ. ಎಷ್ಟು ದಿವಸಗಳಲ್ಲಿ ಕಟ್ಟಡದ ಕೆಲಸ ಪೂರ್ಣವಾಗುವುದು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಸರಕಾರದ ತಪ್ಪಲ್ಲ, ಶಾಲಾ ಕಟ್ಟಡವನ್ನು ಕಟ್ಟುವುದು ತಾಲ್ಲೂಕುಬೋರ್ಡಿನ ಕರ್ತವ್ಯ. ತಾಲ್ಲೂಕು ಬೋರ್ಡು ತನ್ನ ಭಾಗದ ಹಣ ಕೊಟ್ಟಿದೆ, ಆದರೆ ಗ್ರಾಮಪಂಚಾಯಿತಿ ತನ್ನ ಭಾಗದ ಹಣ ಕೊಡದಿರುವುದರಿಂದ ಕೆಲಸ ಅರ್ಧಕ್ಕೆ ನಿಂತಿದೆಯೆಂದು ಗೊತ್ತಾಗಿದೆ. ತಾಲ್ಲೂಕುಬೋರ್ಡಿಗೆ ಒತ್ತಾಯ ಮಾಡಲಾಗಿದೆ. ಪೂರ್ಣವಾಗಿ ಕಟ್ಟಡದ ಕೆಲಸ ಮಾಡಬೇಕೆಂದು ಒತ್ತಾಯಮಾಡಲಾಗಿದೆ.

ಶ್ರೀ ಗಂಗಾಬೋಪಿ.—ಗಾಂಧಿ ಸ್ಮಾರಕ ನಿಧಿಯಲ್ಲಿ ಶಾಲಾ ಕಟ್ಟಡಗಳಿಗೆ ವಂತಿಗೆ ಕೊಡುತ್ತಿರುವುದರಿಂದ ಆ ಫಂಡಿನಿಂದಲಾದರೂ ನಮ್ಮ ಶಾಲಾ ಕಟ್ಟಡವನ್ನು ಪೂರ್ತಿಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಕ್ಕೋಬರ್‌ನೊಳಗೆ ಕಟ್ಟಡವಾದರೆ ಆ ಯೋಜನೆಗೆ ಒಳಪಡುವುದು.

ಶ್ರೀ ಬಿ. ಪಿ. ಗಂಗಾಧರ್.—ಈ ಶಾಲಾ ಕಟ್ಟಡದ ಕೆಲಸ 9 ವರ್ಷಗಳಿಂದ ಆಗುತ್ತಿದೆ. ತಾಲ್ಲೂಕು ಬೋರ್ಡಿನವರು ಕಟ್ಟಬೇಕು, ಪಂಚಾಯಿತಿ ತನ್ನ ಭಾಗದ ಹಣ ಕೊಟ್ಟಿಲ್ಲ ಎಂದು ಹೇಳುತ್ತಿದ್ದೀರಿ. ಇಲ್ಲಿಯವರೆಗೆ ಕೆಲಸವಾಗಿಲ್ಲದಿರುವುದರಿಂದ ನಿಜವಾಗಿಯೂ ಕಟ್ಟಡ ಜಾಗ್ರತೆ ಆಗಬೇಕು, ಅದಕ್ಕೆ ಸಹಾಯಮಾಡಬೇಕು ಎಂಬ ಇಚ್ಛೆ ಇದ್ದರೆ ಸರಕಾರವೇ ಇದನ್ನು ವಹಿಸಿಕೊಂಡು ಏಕೆ ಮಾಡಬಾರದು ? ತಾಲ್ಲೂಕುಬೋರ್ಡ್‌ನ ಮಾಡಬೇಕೆಂದಿದ್ದರೆ ಒತ್ತಾಯಮಾಡಿ ಹಣ ಸಹಾಯ ದೊರೆಯುವಂತೆ ಮಾಡಿ ಜಾಗ್ರತೆ ಕಟ್ಟಡ ಪೂರ್ತಿಯಾಗಲು ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅದು ತಾಲ್ಲೂಕು ಬೋರ್ಡಿನವರ ಅಬ್ಲಿಗೇಟರಿ ಫಂಕ್ಷನ್ನು, ಆದ್ದರಿಂದ ಅವರು ಮಾಡಲೇಬೇಕು. ಸರ್ಕಾರದ ಹೊಸ ನೀತಿಯ ಪ್ರಕಾರ ಅದಕ್ಕೆ ಹೆಚ್ಚಿನ ಹಣವನ್ನೂ ಕೂಡ ಕೊಡಲಾಗಿದೆ. ಆದ್ದರಿಂದ ಅವರು ಶಾಲಾ ಕಟ್ಟಡ ಪೂರಾ ನಿರ್ಮಾಣ ಮಾಡುತ್ತಾರೆ ಎಂದು ಹೇಳಬಹುದು, ಒತ್ತಾಯ ಮಾಡುತ್ತಾ ಇದ್ದೇವೆ.

ಶ್ರೀ ಗಂಗಾಬೋಪಿ.—ತಾಲ್ಲೂಕು ಬೋರ್ಡು ಪ್ರೆಸಿಡೆಂಟರು ಕಾಂಗ್ರೆಸು, ಪಿ.ಎಸ್.ಪಿ. ಅಂತ ಪಕ್ಷಾತೀತ ಮಾಡಿಕೊಂಡು ಅನ್ಯಾಯ ಮಾಡುತ್ತಾ ಇದ್ದಾರೆ.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ಕಟ್ಟಡ ಯಾವ ಪಕ್ಷಕ್ಕೂ ಸೇರಿಲ್ಲ.

ಶ್ರೀ ಬಿ. ಪರಮೇಶ್ವರಪ್ಪ.—ಗ್ರಾಮಪಂಚಾಯ್ತಿಯವರೂ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಇದೆ. ಅವರು ಕೊಡದಿದ್ದರೂ ಚಿಂತೆ ಇಲ್ಲ ತಾಲ್ಲೂಕು ಬೋರ್ಡಿನವರೇ ಮಾಡಬೇಕೆಂದು ಒತ್ತಾಯ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ. ತಾಲ್ಲೂಕು ಬೋರ್ಡಿನವರಿಗೆ ಗ್ರಾಮ ಪಂಚಾಯ್ತಿಯವರು ತಮ್ಮ ಕೋಟಾ ಕೊಡಲು ನಿರಾಕರಿಸಿದಾಗ ನಿಮ್ಮ ಒತ್ತಾಯದ ಫಲ ಏನಾಗುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಗ್ರಾಮ ಪಂಚಾಯ್ತಿಯ ಸಹಾಯದಿಂದ ಕಟ್ಟಿಸಬೇಕಾದ್ದು ತಾಲ್ಲೂಕು ಬೋರ್ಡಿನವರ ಕರ್ತವ್ಯ. ಒಂದು ಪಕ್ಷ ಗ್ರಾಮಪಂಚಾಯ್ತಿಯಲ್ಲಿ ಹಣ ಇಲ್ಲದೇ ಇದ್ದರೂ ತಾಲ್ಲೂಕು ಬೋರ್ಡಿನವರೇ ಅದರೂ ಕೊಟ್ಟು ಕಟ್ಟಡ ಪೂರ್ಣ ಮಾಡಬೇಕಾಗುತ್ತದೆ.

ಶ್ರೀ ಬಿ. ಪರಮೇಶ್ವರಪ್ಪ.—ಒಂದುವೇಳೆ ಅವರು ಆ ರೀತಿ ಮಾಡದೇ ಇದ್ದಾಗ ನೀವೇನಾದರೂ ಆ ಜವಾಬ್ದಾರಿಯನ್ನು ಹೊರುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ರೀತಿ ಜವಾಬ್ದಾರಿ ಹೊರುವುದಕ್ಕಾಗುವುದಿಲ್ಲ ಸರ್ಕಾರದ ಭಾಗವನ್ನು ಕೊಟ್ಟು ಮಾಡಿನಬೇಕಾಗುತ್ತದೆ. ಈಗಾಗಲೇ ನಮ್ಮ ವಂತಿಗೆಯನ್ನು ಇದಕ್ಕೆ ಕೊಟ್ಟಿದ್ದೇವೆ.